ಶೀಘ್ರದಲ್ಲೇ ಒಂದು ಸಮಾರಂಭವಿದೆ. ಅಂದು ಕೆಲವು ಸಂನ್ಯಾಸಿಗಳು ರಾಮಕೃಷ್ಣ ಆಶ್ರಮದಿಂದ ಬರುವವರಿದ್ದಾರೆ. ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾರೆ. ಅಂದು ನೀನೂ ಬಾ. ಸಾಧ್ಯವಾದರೆ ನಿನ್ನ ಗಂಡನನ್ನೂ ಕರೆದುಕೊಂಡು ಬಾ" ಎಂದರು. ಸಂನ್ಯಾಸಿಗಳನ್ನು ಕಾಣುವ ಭಾಗ್ಯ ದೊರೆಯುತ್ತದಲ್ಲಾ ಎಂದು ಅದಕ್ಕೆ ಸಂತೋಷದಿಂದ ಒಪ್ಪಿದೆ. ಆದರೆ ನನ್ನ ಗಂಡ ಬರುವುದರಲ್ಲಿ ನನಗೆ ನಂಬಿಕೆಯಿರಲಿಲ್ಲ. ಸಮಾರಂಭದ ಹಿಂದಿನ ದಿನ ನನ್ನ ಪತಿ ಅನಿಲ್ ಶಾಂತವಾದ ಮನೋಭಾವದಲ್ಲಿದ್ದಾಗ ನನ್ನ ಶಾಲೆಯ ಸಮಾರಂಭದ ಬಗ್ಗೆ ತಿಳಿಸಿದೆ. "ಮಾರನೇ ದಿನ ನನ್ನೊಡನೆ ನಿಮ್ಮನ್ನೂ ಬರಲು ಆಹ್ವಾನಿಸಿದ್ದಾರೆ" ಎಂದೆ. ಅನಿಲ್ ಏನೂ ಉತ್ತರಿಸಲಿಲ್ಲ. ಮಾರನೇ ದಿನ ಶ್ರೀಮಾತೆಗೆ ಪ್ರಾರ್ಥನೆ ಮಾಡಿದ ನಂತರ, ನಾನು ಮಗುವನ್ನೂ ಕರೆದುಕೊಂಡು ಹೊರಟೆ. ಅನಿಲ್ ಮನೆಯಲ್ಲೇ ಇದ್ದರು. "ನಾವು ಹೋಗಿ ಬರುತ್ತೇವೆ" ಎಂದು ತಿಳಿಸಿದೆ. ನನ್ನ ಆಶ್ಚರ್ಯಕ್ಕೆ ಪಾರವೇ ಇರಲಿಲ್ಲ! ಅನಿಲ್ ತಾವೂ ಜೊತೆಯಲ್ಲಿ ಬರುವುದಾಗಿ ತಿಳಿಸಿದರು. ನನಗೆ ಆಗ ತುಂಬ ಆನಂದವಾಯಿತು. ಬಹಳ ದಿನಗಳ ನಂತರ ನಾವು ಮೂವರೂ ಒಟ್ಟಿಗೆ ಮನೆಯಿಂದ ಹೊರಟೆವು.

ಶಾಲೆಯನ್ನು ತುಂಬಾ ಚೆನ್ನಾಗಿ ಅಲಂಕರಿಸಿದ್ದರು. ಎಲ್ಲರೂ ಸಂಭ್ರಮದಿಂದ ಓಡಾಡುತ್ತಿದ್ದರು. ಬಹಳಷ್ಟು ಮಕ್ಕಳ ಪೋಷಕರೂ ಬಂದಿದ್ದರು. ನಾನೂ ಉತ್ಸಾಹದಿಂದ ನಾನು ಓದಿದ ಪ್ರತಿಯೊಂದು ಶಾಲೆಯ ಕೋಣೆಯನ್ನೂ ಅನಿಲ್‌ಗೆ ವಿವರಿಸಿ ತೋರಿಸಿದೆ. ಅವರಿಗೆ ಎಷ್ಟು ಆಸಕ್ತಿಯಿತ್ತೋ ಗೊತ್ತಾಗಲಿಲ್ಲ. ಕೊನೆಗೆ ನಾವು ಒಂದು ಬೆಂಚಿನ ಮೇಲೆ ಎಲ್ಲರೊಡನೆ ಕುಳಿತೆವು. ಸರಿಯಾದ ಸಮಯಕ್ಕೆ ನಾಲ್ಕು ಜನ ಸ್ವಾಮಿಗಳು ಬಂದರು. ಶಾಲೆಯ ಆಡಳಿತ ವರ್ಗದವರು ಅವರನ್ನು ಅತ್ಯಂತ ಗೌರವದಿಂದ ಬರಮಾಡಿಕೊಂಡರು. ಪ್ರಾರ್ಥನಾಗೀತೆ, ಸ್ವಾಗತದ ನಂತರ ಸ್ವಾಮಿಗಳು ಒಬ್ಬೊಬ್ಬರಾಗಿ ಮಕ್ಕಳನ್ನು ಉದ್ದೇಶಿಸಿ ಮಾತನಾಡಿದರು. ನಾನು ಅತ್ಯಂತ ಆಸಕ್ತಿಯಿಂದ ಕೇಳುತ್ತಿದ್ದೆ. ಅವರು ಹೇಳಿದ ಮಾತಿನ ಸಾರ ಹೀಗಿತ್ತು: "ವಿದ್ಯಾರ್ಥಿ ಅವಧಿಯೇ ಚಾರಿತ್ರ್ಯನಿರ್ಮಾಣ ಮಾಡಿಕೊಳ್ಳಲು ಸರಿಯಾದ ಸಮಯ. ಶೀಲ ಸರಿಯಿಲ್ಲದಿದ್ದಲ್ಲಿ ಎಷ್ಟು ಕಲಿತರೂ ಅದು ಕಲಿಕೆಯೇ ಅಲ್ಲ. ಉತ್ತಮ ಶೀಲದಿಂದ ಧೈರ್ಯ ಬರುತ್ತದೆ. ಯಾರು ಧೈರ್ಯವಾಗಿರಬಲ್ಲರೋ, ಪ್ರಪಂಚದ ಸಮಸ್ಯೆಗಳನ್ನು ಎದುರಿಸುವ ಸಾಮರ್ಥ್ಯವುಳ್ಳವರೋ, ಅವರೇ ನಿಜವಾದ ಮನುಷ್ಯರು. ವಿವೇಕಾನಂದರು ಹೇಳಿದ್ದಾರೆ, 'ಶಕ್ತಿಯೇ ಜೀವನ, ದುರ್ಬಲತೆಯೇ ಮರಣ' ಎಂದು." ಆ ಸ್ವಾಮಿಗಳ ಮಾತು ಮುಗಿದಾಗ ಎಲ್ಲರೂ ಉತ್ಸಾಹದಿಂದ ಚಪ್ಪಾಳೆ ತಟ್ಟಿದರು.

ಮತ್ತೊಬ್ಬ ಹಿರಿಯ ಸಂನ್ಯಾಸಿಗಳು ತಮ್ಮ ಪ್ರವಚನದಲ್ಲಿ ಹೀಗೆ ಹೇಳಿದರು: "ಒಂದು ಭಾವನೆಯನ್ನು ತೆಗೆದುಕೊಳ್ಳಿ. ಅದನ್ನು ನಿಮ್ಮ ಜೀವನದಲ್ಲಿ ಅಭ್ಯಾಸ ಮಾಡಿ. ಅದನ್ನೇ ಆಲೋಚನೆ ಮಾಡಿ. ಅದನ್ನೇ ಕನಸು ಕಾಣಿರಿ. ಆ ಒಂದು ಭಾವನೆಗಾಗಿ ನಿಮ್ಮ ಬಾಳನ್ನೆಲ್ಲಾ ಸವೆಸಿ. ನಿಮ್ಮ ಮೆದುಳು, ಮಾಂಸಖಂಡಗಳು, ನರಗಳು ಮತ್ತು ದೇಹದ ಪ್ರತಿಯೊಂದು ಭಾಗವೂ ಕೂಡ ಆ ಭಾವದಿಂದ ತುಂಬಿತುಳುಕಾಡಲಿ. ಉಳಿದ ಆಲೋಚನೆಗಳನ್ನೆಲ್ಲಾ ಅವುಗಳ ಪಾಡಿಗೆ ಬಿಡಿ. ಜಯ ಪಡೆಯುವುದಕ್ಕೆ ಇದೊಂದೇ ದಾರಿ."

ಸ್ವಾಮಿಗಳು ಹೇಳಿದ ಈ ಮಾತುಗಳಿಂದ ನಾನು ಮುಗ್ಧಳಾದೆ; ಪಕ್ಕದಲ್ಲಿ ಕುಳಿತಿದ್ದ ಅನಿಲ್‌ರನ್ನು ಓರೆಗಣ್ಣಿನಿಂದ ನೋಡಿದೆ. ಅವರೂ ಬಹಳ ಏಕಾಗ್ರತೆಯಿಂದ ಕೇಳುತ್ತಿದ್ದಂತೆ ಕಂಡಿತು. ಇದ್ದಕ್ಕಿದ್ದಂತೆ ಆ ಸ್ವಾಮೀಜಿ ಅಲ್ಲಿ ನೆರೆದಿದ್ದ ಪೋಷಕರನ್ನು ಉದ್ದೇಶಿಸಿ ಮಾತನಾಡಲಾರಂಭಿಸಿದರು. ಮಧ್ಯೆ ಮಧ್ಯೆ ವಿವೇಕಾನಂದರ ಸಂದೇಶಗಳನ್ನು ಉದಹರಿಸುತ್ತಿದ್ದರು: "ಮನಸ್ಸೇ ಎಲ್ಲಕ್ಕೂ ಮೂಲ. ಒಬ್ಬನು ಪವಿತ್ರ ಅಥವಾ ಅಪವಿತ್ರ ಎನ್ನುವುದನ್ನು ಮನಸ್ಸೇ ನಿರ್ಧರಿಸುತ್ತದೆ. ಮೊದಲು ಮನುಷ್ಯನು ತನ್ನ ಮನಸ್ಸಿನಲ್ಲಿರುವ ತಪ್ಪುಗಳನ್ನು ಗುರುತಿಸಬೇಕು. ನಂತರ ಬೇರೆಯವರ ತಪ್ಪಿನತ್ತ ಗಮನ ಹರಿಸಬೇಕು. ಆದಕಾರಣ ನಿಮ್ಮ ಭವಿಷ್ಯವನ್ನು ನೀವೇ ನಿರ್ಮಿಸಿಕೊಳ್ಳಿ. ಕಳೆದುದನ್ನು ಕುರಿತು ವ್ಯಥೆಪಡಬೇಡಿ. ಅನಂತ ಭವಿಷ್ಯ ನಿಮ್ಮೆದುರಿಗೆ ಇದೆ. ನಿಮ್ಮ ಪ್ರತಿಯೊಂದು ಮಾತು, ಆಲೋಚನೆ, ಕೆಲಸ ನಿಮಗಾಗಿ ಕಾದುಕೊಂಡಿದೆ. ಕೆಟ್ಟ ಆಲೋಚನೆ, ಕೆಟ್ಟ ಕೆಲಸ – ಇವು ರಾಕ್ಷಸರಂತೆ ನಿಮ್ಮ ಮೇಲೆ ಬೀಳಲು ಕಾಯ್ದುಕೊಂಡಿರುವಂತೆ, ಒಳ್ಳೆಯ ಆಲೋಚನೆ, ಒಳ್ಳೆಯ ಕಾರ್ಯ – ಇವು ಸಾವಿರಾರು ದೇವದೂತರ ಶಕ್ತಿಯೊಂದಿಗೆ ನಿಮ್ಮನ್ನು ಎಂದೆಂದಿಗೂ ರಕ್ಷಿಸಲು ಕಾಯ್ದುಕೊಂಡಿವೆ ಎನ್ನುವುದೇ ಉತ್ತೇಜನಕಾರಿಯಾದ ಭರವಸೆ!"

ಮಾತು ಮುಂದುವರೆಸುತ್ತಾ ಆ ಸ್ವಾಮೀಜಿ ಮತ್ತೆ ಹೇಳಿದರು: "ನಿಮಗೆ ಭಗವಂತನು ಈ ಜೀವನವನ್ನು ಕೊಟ್ಟಿರುವುದು ನಿಮ್ಮ ಕುಟುಂಬಕ್ಕೆ, ಸಮಾಜಕ್ಕೆ ಒಳಿತು ಮಾಡುವುದಕ್ಕೆ. ಯಾರು ತಮ್ಮ ಕುಟುಂಬವನ್ನು ನೋಡಿಕೊಳ್ಳುವುದಿಲ್ಲವೊ ಅವರು ತಮ್ಮ ಕುಟುಂಬದ ಸೇವೆ ಮಾಡುತ್ತಿಲ್ಲ, ಸಮಾಜಕ್ಕಂತೂ ಅದು ದೂರದ ಮಾತು!" ಮತ್ತೆ ಆ ಸ್ವಾಮೀಜಿ, ವಿವೇಕಾನಂದರ ಮಾತನ್ನು ಹೇಳಿದರು: "ಯಾರು ಬೇರೆಯವರಿಗಾಗಿ ಬದುಕುತ್ತಾರೆಯೋ ಅವರೇ ನಿಜವಾಗಿ ಬದುಕಿರುವವರು. ಉಳಿದವರು ಬದುಕಿದ್ದರೂ ಸತ್ತಂತೆ. ನಾವು ಏನಾಗಿರುವೆವೋ ಅದಕ್ಕೆ ನಾವೇ ಹೊಣೆ. ನಾವು ಏನಾಗಬೇಕೆಂದು ನಮ್ಮ ಇಚ್ಛೆಯಿರುವುದೋ ಹಾಗೆ ಆಗಲು ಬೇಕಾದ ಶಕ್ತಿಯು ನಮ್ಮಲ್ಲಿಯೇ ಇರುವುದು. ಈಗ ನಾವೇನಾಗಿರುವೆವೋ ಅದು ನಮ್ಮ ಪೂರ್ವ ಕರ್ಮಗಳ ಫಲವಾಗಿದ್ದಲ್ಲಿ, ಮುಂದೆ ನಾವು ಹೇಗಾಗಬೇಕೆಂದು ನಮ್ಮ ಇಚ್ಛೆಯಿರುವುದೋ ಅದು ಇಂದಿನ ಕರ್ಮದಿಂದ ಸಾಧ್ಯ. ಆದುದರಿಂದ ಕರ್ಮ ಮಾಡುವ ರೀತಿಯನ್ನು ತಿಳಿದುಕೊಳ್ಳಬೇಕು. ಒಂದನ್ನು ನೆನಪಿನಲ್ಲಿಟ್ಟುಕೊಳ್ಳಿ, ನಿಮಗೆ ಸಮಸ್ಯೆಗಳು ಬಂದಾಗ, ಯಾರೂ ಸಹಾಯ ಮಾಡಲು ಮುಂದೆ ಬರದೆ ಇದ್ದರೆ, ನಿಮ್ಮ ನೆರವಿಗೆ ದೇವರಿದ್ದೇ ಇದ್ದಾನೆ."

ಈ ಪ್ರವಚನದ ಪ್ರತಿಯೊಂದು ಮಾತೂ ನಮ್ಮ ಸಂಸಾರವನ್ನು ಕುರಿತ ಮಾತೆಂದೇ ನಾನು ಭಾವಿಸಿದೆ. ಈಗ ನೇರವಾಗಿ ಅನಿಲ್ ರತ್ತ ನೋಡಿದೆ. ಅವರ ಮುಖ ಭಾವರಹಿತವಾಗಿತ್ತು. ಅವರು ಏನು ಚಿಂತಿಸುತ್ತಿದ್ದಾರೆ ಎಂದು ನನಗೆ ಊಹಿಸಲಾಗಲಿಲ್ಲ. ಆ ಸಮಾರಂಭ ವಿದ್ಯಾರ್ಥಿನಿಯರ ಭಜನೆಯೊಂದಿಗೆ ಮುಗಿಯಿತು.

**ಶ್ರೀಮಾತೆ ನಗುತ್ತಿರುವಂತಿದೆ:** ಆ ಸಂಜೆ ನನ್ನ ಪಾಲಿಗೆ ಒಂದು ಸ್ಮರಣೀಯ ಸಂಜೆಯಾಗಿತ್ತು. ಆದರೆ ಅನಿಲ್ ಏನೋ ವ್ಯಾಕುಲತೆಯಲ್ಲಿರುವಂತೆ ಕಾಣುತ್ತಿದ್ದರು. ಕಾರಣ ಕೇಳಿದೆ. ಮೌನವೇ ಅವರ ಉತ್ತರವಾಗಿತ್ತು. ನಮ್ಮ ಮಂಚದ ಬದಿಗೆ ಕುಳಿತು ಬಹಳ ಕಾಲ